**ಸಾಕ್ಷಿಗೆ ದಿನಾಂಕಃ 17.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಟಿ.ಎಂ.ಎಸ್. ವಕೀಲರಿಂದಃ**

ನಾನು ಓದಿರುವುದಿಲ್ಲ. ಈ ಪ್ರಕರಣದ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಪಿರ್ಯಾದಿಯು ದೂರಿನಲ್ಲಿ ಕೇಳಿರುವ ಪರಿಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ಆರೋಪಿ ಒಂದೇ ಊರಿನವರಾಗಿದ್ದು ಸ್ನೇಹಿತರಾಗಿರುತ್ತೇವೆ. ಆರೋಪಿಯು ಅಡುಗೆ ಕಂಟ್ರಾಕ್ಟರ್ ಆಗಿರುತ್ತಾರೆ. ಪಿರ್ಯಾದಿಯ ಮನೆಗೆ ನಾನು ಮತ್ತು ರುದ್ರಸ್ವಾಮಿ ಹೋಗಿರುತ್ತೇವೆ. ರುದ್ರಸ್ವಾಮಿ ನಮ್ಮ ಗ್ರಾಮದವರಾಗಿದ್ದು ಅವರು ಈಗ ತೀರಿಕೊಂಡಿರುತ್ತಾರೆ. ಅವರು ನಮ್ಮ ಊರಿನಲ್ಲೆ ವಾಸವಿದ್ದರು. ಪ್ರಸ್ತುತ ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಆರೋಪಿಯು ಹಣದ ಅವಶ್ಯಕತೆಗಾಗಿ ಪಿರ್ಯಾದಿಯನ್ನು ಭೇಟಿ ಮಅಡಿದ್ದರು ಎಂದರೆ ಸರಿ. ಆರೋಪಿಯು ಯಾವ ಉದ್ದೇಶಕ್ಕಾಗಿ ಹಣವನ್ನು ಕೇಳಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪಿರ್ಯಾದಿಯು ಆರೋಪಿಗೆ ಚೆಕ್ ನ್ನು ನೀಡಿದ್ದು ಅದು ಯಾವ ಬ್ಯಾಂಕಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿರುವುದಿಲ್ಲ.

ಆರೋಪಿಯು ತನ್ನ ಅಡುಗೆ ಕೆಲಸಕ್ಕಾಗಿ ಪಿರ್ಯಾದಿಯ ಬಳಿ ಎರಡೂವರೆ ಲಕ್ಷ ರೂ.ಗಳನ್ನು ಸಾಲವಾಗಿ ಕೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯು ಪಿರ್ಯಾದಿಗೆ ಚೆಕ್ ನ್ನು ನೀಡಿದ್ದರು. ಅದು ಯಾವ ಬ್ಯಾಂಕಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯು ಒಂದೂವರೆ ಲಕ್ಷ ರೂ.ಗಳನ್ನು ಪಿರ್ಯಾದಿಯಿಂದ ಪಡೆದು ಚೆಕ್ಕನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದಿಯು ನೋಟಿಸನ್ನು ಆರೋಪಿಗೆ ನೀಡಿದ ನಾನು ಮತ್ತು ರುದ್ರಸ್ವಾಮಿ ಪಿರ್ಯಾದಿಯನ್ನು ಅವರ ಅಂಗಡಿಯ ಬಳಿ ಭೇಟಿ ಮಾಡಿರುತ್ತೇವೆ. ನಾನು ಮತ್ತು ರುದ್ರಸ್ವಾಮಿ ಪಿರ್ಯಾದಿಯನ್ನು ಭೇಟಿ ಮಾಡದೆ ಇದ್ದರೂ ಸಹ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಗ್ರಾಮದ ನಾಗೇಶ ಬಿನ್ ನಂಜುಂಡಪ್ಪ ಅಡುಗೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರು ಈಗ ಟಿ.ನರಸೀಪುರ ಟೌನ್ ನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಆರೋಪಿಯು ಸದರಿಯವರಿಂದಲೂ ಅಡುಗೆ ಕೆಲಸಕ್ಕಾಗಿ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿಯವರು ಆರೋಪಿಯ ವಿರುದ್ಧ ಪ್ರಕರಣ ದಾಖಲು ಮಾಡಿ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಪ್ರಕರಣದಲ್ಲಿ ಆರೋಪಿಯು ಒಂದು ಲಕ್ಷದ ನಲವತ್ತು ಸಾವಿರ ರೂ.ಗಳನ್ನು ರಾಜಿಯಂತೆ ಪಾವತಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಪಿರ್ಯಾದಿಯಿಂದ ಒಂದು ಲಕ್ಷ ರೂ.ಗಳನ್ನು ಸಾಲವಾಗಿ ಪಡೆದಿದ್ದು, ಅದಕ್ಕೆ ಬದಲಾಗಿ ಚೆಕ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**